3661; ಶ್ರೀ ರೇವಣ್ಣ ಹೆಚ್.ಡಿ.

ಅ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು);

ಆ) ಇವರು ಪಡೆಯುತ್ತಿರುವ ಗೌರವಧನವೆಷ್ಟು ಹಾಗೂ ಹೆಚ್ಚಿಸಲಾಗಿರುವ ಗೌರವಧನವೆಷ್ಟು; ಸರ್ಕಾರ ಭರಿಸುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಜ್ಯದಲ್ಲಿ 59,899 ಅಂಗನವಾಡಿ ಕಾರ್ಯಕರ್ತೆಯರು ಮತ್ತು 3,253 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 58,611 ಸಹಾಯಕಿಯರಿದ್ದಾರೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಅಂಗನವಾಡಿ ಕಾರ್ಯಕರ್ತೆಯರು ರೂ. 6000/– ಮಿನಿ ಅಂಗನವಾಡಿ ಕಾರ್ಯಕರ್ತೆಯರು ರೂ. 3750/– ಹಾಗೂ ಅಂಗನವಾಡಿ ಸಹಾಯಕಿಯರು ರೂ. 3000/– ಗೌರವಧನ ಪಡೆಯುತ್ತಿದ್ದಾರೆ. 2015–16ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ವತಿಯಿಂದ, ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 500/– ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ರೂ. 250/– ಹೆಚ್ಚುವರಿ ಗೌರವಧನವನ್ನು ಹೆಚ್ಚಿಸಲಾಗಿದೆ. ಇವರಿಗೆ ನೀಡುವ ಗೌರವಧನದಲ್ಲಿ, ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 3000/– ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 1500/– ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ. 1500/– ಗಳನ್ನು ಭರಿಸುತ್ತಿದೆ. 2014–15ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಹೆಚ್ಚುವರಿ ಗೌರವಧನ ಪಾವತಿಸಲು ರೂ. 23033.65 ಲಕ್ಷಗಳನ್ನು ಭರಿಸಿರುತ್ತದೆ.

ಶ್ರೀ ಶಿವಣ್ಣ ಹೆಚ್.ಪಿ, ಎಷ್ಟಾನ ಸಭಾ ಸದಸ್ಯರು ಮಂಡಿಸಿದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3661ಕ್ಕೆ ಉತ್ತರಿಸಲಾಗುವುದು

ಅಂಗನವಾಡಿ ಕಾರ್ಯಕರ್ತೆಯರ / ಸಹಾಯಕಿಯರ ಹುದ್ದೆಗಳ ವಿವರ

ಕ್ರ ಸಂ	ಜಿಲ್ಲೆಯ ಹೆಸರು	ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ			ಮಿನಿ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ			ಅಂಗನವಾಡಿ ಸಹಾಯಕಿಯರ ಸಂಖ್ಯೆ		
		ಮಂಜೂರಾತಿ	ಕಾರ್ಯನಿರತ	ಖಾಲಿ	ಮಂಜೂರಾತಿ	ಕಾರ್ಯನಿರತ	ಖಾಲಿ	ಮಂಜೂರಾತಿ	ಕಾರ್ಯನಿರತ	ಖಾಲಿ
1	ಬಾಗಲಕೋಟೆ	2059	1984	75	57	54	3	2059	1929	130
2	ಬೆಂಗಳೂರು ನಗರ	2006	1963	43	91	87	4	2006	1890	116
3	ಬೆಂಗಳೂರು (ಗ್ರಾ)	1088	1080	8	121	119	2	1088	1054	34
4	ಬೆಳಗಾಂ	5235	5086	149	59	53	6	5235	4939	296
5	ಬಳ್ಳಾರಿ	2766	2739	27	48	48	0	2766	2701	65
6	ಬೀದರ	1863	1790	73	27	26	1	1863	1761	102
7	ವಿಜಾಪುರ	2062	1985	77	44	42	2	2062	1951	111
8	ಚಾಮರಾಜನಗರ	1363	1327	36	50	50	0	1363	1270	93
9	ಚಿಕ್ಕಬಳ್ಳಾಪುರ	1825	1799	26	113	112	1	1825	1772	53
10	ಚಿಕ್ಕಮಗಳೂರು	1663	1635	28	158	149	9	1663	1600	63
11	ಚಿತ್ರದುರ್ಗ	2202	2165	37	116	115	1	2202	2144	58
12	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
13	ದಾವಣಗೆರೆ	1959	1929	30	86	83	3	1959	1908	51

14	ಧಾರವಾಡ	1457	1436	21	10	10	0	1457	1425	32
15	ಗದಗ	1102	1069	33	4	4	0	1102	1020	82
16	ಹಾವೇರಿ	2961	2911	50	73	70	3	2961	2844	117
17	ಬಾಗಲಕೋಟೆ	1250	1235	15	50	50	0	1250	1216	34
18	ಬೆಳಗಾವಿ	2216	2202	14	275	274	1	2216	2150	66
19	ಜಮಖಂಡಿ	1887	1861	26	27	27	0	1887	1832	55
20	ಬಿಜಾಪುರ	847	821	26	23	21	2	847	802	45
21	ಹುಲಕೋಟೆ	1950	1871	79	81	79	2	1950	1806	144
22	ಬಿಜಾಪುರ	1742	1699	43	50	50	0	1742	1633	109
23	ಮುಧೋಳ	2220	2157	63	306	301	5	2220	2104	116
24	ಮೈಸೂರು	2658	2618	40	169	169	0	2658	2567	91
25	ರಾಮನಗರ	1283	1250	33	242	227	15	1283	1727	56
26	ರಾಯಚೂರು	2594	2549	45	41	41	0	2594	2502	92
27	ಶಿವಮೊಗ್ಗ	2117	2079	38	314	307	7	2117	2043	74
28	ತುಮಕೂರು	3562	3534	28	519	508	11	3562	3429	133
29	ಉಡುಪಿ	1146	1144	2	0	0	0	1146	1130	16
30	ಯಾದಗಿರಿ	1727	1618	109	131	131	0	1727	1627	100
	ಒಟ್ಟು	61187	59899	1288	3331	3253	78	61187	58611	2576

ಅಧ್ಯಕ್ಷರು: ಮಾನ್ಯ ರೇವಣ್ಣನವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ನಾನು ಹೆಚ್.ಡಿ.ರೇವಣ್ಣನವರು ಕೇಳಿರುವಂತಹ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ನನಗೆ ಅನುಮತಿಯನ್ನು ನೀಡಿದ್ದಾರೆ. ಆದಕಾರಣ ನಾನು ಆ ಪ್ರಶ್ನೆಯನ್ನು ಕೇಳುತ್ತೇನೆ.

ಪ್ರಶ್ನೆ ಸಂಖ್ಯೆ:3661

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಸಿ.ಎನ್. ಬಾಲಕೃಷ್ಣ (ಮಾನ್ಯ ಹೆಚ್.ಡಿ.ರೇವಣ್ಣನವರ ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 59,899 ಅಂಗನವಾಡಿ ಕಾರ್ಯಕರ್ತೆಯರು ಮತ್ತು 3253 ಮಿನಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ 58,611 ಸಹಾಯಕಿಯರು ಇದ್ದಾರೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಪಡೆಯುತ್ತಿರುವ ಸಂಭಾವನೆ ರೂ. 6,000.00 ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರು ರೂ. 3,750.00 ಹಾಗೂ ಸಹಾಯಕಿಯರು ರೂ. 3,000.00 ಗೌರವಧನ ಪಡೆಯುತ್ತಿದ್ದಾರೆಂದು ಉತ್ತರ ನೀಡಿದ್ದಾರೆ. ಇವತ್ತು ಅವರುಗಳು ಜೀವನ ನಿರ್ವಹಣೆ ಮಾಡುತ್ತಿರುವುದು ಕಷ್ಟವಿದೆ. ಸರ್ಕಾರವು ಅವರನ್ನು ಕೂಡ ಉತ್ತಮವಾದಂತಹ ರೀತಿಯಲ್ಲಿ ಬದುಕನ್ನು ಸಾಗಿಸುವ ದೃಷ್ಟಿಯಿಂದ ಹೆಚ್ಚಿಗೆ ಮಾಡಿಕೊಡುವ ಬಗ್ಗೆ ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕು ನಾನು ತಮ್ಮ ಮೂಲಕ ಮೇಡಂರವರಲ್ಲಿ ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಶ್ರೀಮತಿ ಉಮಾಶ್ರೀ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸರ್ಕಾರವು ಬಂದ ನಂತರದಲ್ಲಿ ಆಯವ್ಯಯದಲ್ಲಿ ಪ್ರತಿ ವರ್ಷದ ಆಯವ್ಯಯದಲ್ಲಿ ರೂ. 500–500 ಹೆಚ್ಚು ಮಾಡಿಕೊಂಡು ಬಂದಿದ್ದೇವೆ. ಅಲ್ಲಿಯವರೆಗೆ ಇದ್ದಂತಹ ಗೌರವಧನ ಏನಿತ್ತು ಈಗ ಅದು ರೂ. 6,000.00ಕ್ಕೆ ಬಂದು ನಿಂತಿದೆ. ಇನ್ನೂ ಹೆಚ್ಚು ಮಾಡಬೇಕೆಂಬ ಬೇಡಿಕೆಯು ಇದೆ. ಆದರೆ ನಮ್ಮ ಮುಂದಿನ ಬಜೆಟ್ ಸಮಯದಲ್ಲಿ ಈ ಬಗ್ಗೆ ಚಿಂತಿಸಲಾಗುವುದು.

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಹೊರ ಗುತ್ತಿಗೆಯ ಆಧಾರದಲ್ಲಿ ಮಾಡಬಹುದು.

ಅಧ್ಯಕ್ಷರು: ಅವರು ಉತ್ತರ ಕೊಟ್ಟಿದ್ದಾರೆ, ಇದು policy matter ಆಗಿದೆ. ಈಗ ಅದನ್ನು ತಕ್ಷಣ ಹೇಳುವುದಕ್ಕಾಗುವುದಿಲ್ಲ. ಆಯಿತು ತಾವು ಬಿಡಿ. ಶ್ರೀ ರಮೇಶ್ ಬಂಡಿಸಿದ್ದೇಗೌಡರು ಸದನದಲ್ಲಿಲ್ಲ. ಮಾನ್ಯ ಹೆಚ್.ಸಿ.ಬಾಲಕೃಷ್ಣರವರೆ ತಾವು ಪ್ರಶ್ನೆಯನ್ನು ಕೇಳಿ.

2280; ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಅ) ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿವೆ;

ಆ) ಯಾವ್ಯಾವ ಶಾಲೆಗಳಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ; (ಸಂಪೂರ್ಣ ವಿವರ ನೀಡುವುದು)

ಇ) ಇವುಗಳ ಪೈಕಿ ಎಷ್ಟು ಶಾಲೆಗಳಲ್ಲಿ ಕೊಠಡಿಗಳ ಕೊರತೆ, ಶಿಥಿಲವಾದ ಕೊಠಡಿಗಳು, ಶೌಚಾಲಯಗಳ ಕೊರತೆ ಇರುತ್ತದೆ;

ಈ) ಇವುಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು? ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ:

ಕ್ರ.ಸಂ	ಶಾಲಾ ವಿಧ	ಶಾಲೆಗಳ ಸಂಖ್ಯೆ
1	ಪ್ರಾಥಮಿಕ ಶಾಲೆ	446
2	ಪ್ರೌಢ ಶಾಲೆ	31